(ಈ ಸಾಕ್ಷಿಯನ್ನು ದಿ.14.01.2020 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು) :

<u>ಪಾಟೀ ಸವಾಲು :</u> 2 ನೇ ಎದುರುದಾರರ ಪರ ಶ್ರೀ ಜೆ.ಪಿ. ವಕೀಲರಿಂದ :

2 ನೇ ಎದುರುದಾರ ಸಂಸ್ಥೆ ಲೇ-ಆಫ್ ಘೋಷಣೆ ಮಾಡಿದ ವೇಳೆಯಲ್ಲಿ ಅರ್ಧ ವೇತನವನ್ನು ನೀಡಿದ್ದು, ಉಳಿದ ಅರ್ಧ ವೇತನ ನೀಡುವಂತೆ ನಾನು ಮತ್ತು ಉಳಿದ 32 ಅರ್ಜಿದಾರರು ಅರ್ಜಿ ಸಲ್ಲಿಸಿದ್ದೇವೆ. ನಿ.ಪಿ-1 ರಂತೆ ಆದೇಶ ಆದ ಅನ್ವಯ ಪ್ರಕರಣದ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದರೆ ಸರಿ. Ref. No.40/14 ನ್ನು General Secretary, Kirlosakar Electric Company Employees Association Unit-4 ವತಿಯಿಂದ ಸಲ್ಲಿಸಲಾಗಿತ್ತು ಎಂದರೆ ಸರಿ. ಈ ಪ್ರಕರಣದ ನಾನು ಮತ್ತು ಇತರೆ 32 ಅರ್ಜಿದಾರರು Ref. No.40/14 ರಲ್ಲಿ ಪಕ್ಷಗಾರರು ಇರಲಿಲ್ಲ ಎಂದು ಗೊತ್ತಿಲ್ಲ. Ref. No.40/14 ರಲ್ಲಿ ನಮೂದಿಸಿದ 100 ಕಾರ್ಮಿಕರ ಪೈಕಿ ನಾನು ಮತ್ತು ಇತರೆ 32 ಅರ್ಜಿದಾರರು ಸೇರಿದ್ದೇವೆ. Ref. No.40/14 ರಲ್ಲಿ ಯುನಿಯನ್ ಪರವಾಗಿ ನಾನು ಮಾತ್ರ ಸಾಕ್ಷಿ ಹೇಳಿದ್ದೇನೆ ಎಂದರೆ ಸರಿ. ನಮಗೆ 2 ನೇ ಎದುರುದಾರ ಸಂಸ್ಥೆಯಿಂದ ಬಾಕಿ ಬರಬೇಕಿದ್ದ 85,86,509/- ರೂ ಹಣದ ಬಗ್ಗೆ ಅರ್ಜಿಯಲ್ಲಿ ನಮೂದು ಮಾಡಿಲ್ಲ ಎಂದರೆ ಪ್ರತ್ಯೇಕ ಪಟ್ಟಿಯನ್ನು ನಿ.ಪಿ.-3 ರಂತೆ ಸಲ್ಲಿಸಿರುವುದಾಗಿ ನುಡಿಯುತ್ತಾರೆ. ದಿ.11.12.2019 ರಂದು ದಾಖಲಾತಿಗಳನ್ನು ಸಲ್ಲಿಸುವ ಬಗ್ಗೆ ಮೆಮೋ ಸಲ್ಲಿಸಿದ್ದೇನೆ ಎಂದರೆ ಸರಿ. ದಿ.11.12.2019 ರಂದು ನಿ.ಪಿ.-6 ರ ಜೊತೆ ಲಗತ್ತು ಮಾಡಿದ ಕಾರ್ಮಿಕರ ವಿವರಣಾ ಪಟ್ಟಿಯನ್ನು ಹಾಜರು ಮಾಡಿದ್ದೇನೆ. ನಿ.ಪಿ.-5 ಮತ್ತು ನಿ.ಪಿ.-6 ರ ಜೊತೆ ಲಗತ್ತು ಮಾಡಿದ ಕಾರ್ಮಿಕರ ವಿವರಣಾ ಪಟ್ಟಿಗೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ದಿ.11.12.2019 ರಂದು ನಿ.ಪಿ.-5 ಮತು ನಿ.ಪಿ.-6 ರ ಜೊತೆ ಲಗತ್ತು ಮಾಡಿದ ಕಾರ್ಮಿಕರ ವಿವರಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ. 33 ಜನ ಕಾರ್ಮಿಕರಿಗೆ ತಲಾ ಬರಬೇಕಾದ ಬಾಕಿ ಹಣದ ಬಗ್ಗೆ ಒಟ್ಟು ಹಣ 85,86,509/- ರೂ ಬಗ್ಗೆ Ref. No.40/14 ರ ಆದೇಶದಲ್ಲಿ ಪ್ರತ್ಯೇಕವಾಗಿ ನಮೂದು ಮಾಡಿಲ್ಲ. ಸಾಕ್ಷಿದಾರರು ನಿ.ಪಿ.-3 ರಲ್ಲಿ ವಿವರಿಸಿದಂತೆ ಲೆಕ್ಕಚಾರ ಮಾಡಿ ವಿವರ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸ್ವತಃ ನುಡಿಯುತ್ತಾರೆ. ನಿ.ಪಿ.-3 ರಲ್ಲಿ ವಿವರಿಸಿದಂತೆ ಲೆಕ್ಕಚಾರ ಮಾಡಿದ ಬಗ್ಗೆ ಆಧಾರದ ವಿವರವನ್ನು ಹಾಜರು ಮಾಡಿಲ್ಲ ಎಂದರೆ ಸರಿ. ಪ್ರತ್ಯೇಕ ಕಾರ್ಮಿಕರು ಲೇ-ಆಫ್ ಅವಧಿಗೆ ಮೊದಲು ಪಡೆಯುತ್ತಿದ್ದ ವೇತನದ ಬಗ್ಗೆ ದಾಖಲೆ ಹಾಜರು ಮಾಡಿಲ್ಲ.

33 ಜನ ಕಾರ್ಮಿಕರ ಬಗ್ಗೆ ಗುರುತಿನ ಚೀಟಿಯನ್ನು ಹಾಜರು ಮಾಡಿಲ್ಲ. 55 ಜನ ಕಾರ್ಮಿಕರಿಗೆ ಲೇ-ಆಫ್ ಘೋಷಣೆ ಮಾಡಿದ್ದು ಈ ಪೈಕಿ 33 ಜನ ಕಾರ್ಮಿಕರು ಅರ್ಜಿಯನ್ನು ಸಲ್ಲಿಸಿದ್ದು ಉಳಿದ ಕಾರ್ಮಿಕರು ಬಂದರೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸಲಾಗುವುದು. ಉಳಿದ 22 ಜನ ಕಾರ್ಮಿಕರ ಹೆಸರು ಹೇಳಲು ಬರುವುದಿಲ್ಲ. Ref. No.40/14 ರಲ್ಲಿ ಉಳಿದ 22 ಜನ ಕಾರ್ಮಿಕರು ಸೇರಿದ್ದರು ಎಂದು ಗೊತ್ತಿಲ್ಲ. Ref. No.40/14 ರಲ್ಲಿ ಆದ ಆದೇಶ ಅನ್ವಯ ಯೂನಿಯನ್ ವತಿಯಿಂದ ಅರ್ಜಿಯನ್ನು ಸಲ್ಲಿಸಲು ತೊಂದರೆ ಇರಲಿಲ್ಲ.

2 ನೇ ಎದುರುದಾರರ ಸಂಸ್ಥೆಯಿಂದ ಹಣ ನೀಡುವ ಬಗ್ಗೆ ಬಾದ್ಯತೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕೇಳಿದಂತೆ ಪರಿಹಾರಕ್ಕೆ ಅರ್ಹ ಇಲ್ಲ ಎಂದರೆ ಸರಿಯಲ್ಲ. ಅರ್ಜಿ ಪ್ಯಾರ ಸಂಖ್ಯೆ: 4 ರಲ್ಲಿ ವಿವರಿಸಿದಂತೆ ಕ್ರಮ ಸಂಖ್ಯೆ ಮತ್ತು ಅವಧಿಯ ಬಗ್ಗೆ Ref. No.40/14 ರಲ್ಲಿ ಆದ ಆದೇಶದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. Ref. No.40/14 ರಲ್ಲಿ ಆದ ಆದೇಶದಲ್ಲಿ ವಿವರವನ್ನು ನಮೂದಿಸದೆ ಇದ್ದ ಕಾರಣ ಅರ್ಜಿಯಲ್ಲಿ ಕೇಳಿದಂತೆ ಪರಿಹಾರಕ್ಕೆ ಅರ್ಹ ಇಲ್ಲ ಎಂದರೆ ಸರಿಯಲ್ಲ. ಒಪ್ಪಂದದ ಪ್ರಕಾರ ಬರಬೇಕಾದ ಹಣ, ವಿ.ಡಿ.ಎ. ಅನ್ವಯ ಬರಬೇಕಾದ ಹಣ, ವಾರ್ಷಿಕ ವೇತನ ಬಡ್ತಿ ಅನ್ವಯ ಬರಬೇಕಾದ ಹಣವನ್ನು ಸೇರಿಸಿ ನಿ.ಎ.-3 ರಲ್ಲಿ ನಮೂದಿಸಲಾಗಿದೆ. ಒಪ್ಪಂದದ ಪ್ರಕಾರ ಬರಬೇಕಾದ ಹಣ, ವಿ.ಡಿ.ಎ. ಅನ್ವಯ ಬರಬೇಕಾದ ಹಣ, ವಾರ್ಷಿಕ ವೇತನ ಬಡ್ತಿ ಅನ್ವಯ ಬರಬೇಕಾದ ಹಣದ ಬಗ್ಗೆ ಪ್ರತ್ಯೇಕವಾಗಿ Ref. No.40/14 ರಲ್ಲಿ ಆದ ಆದೇಶದಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ.

ಮರು ವಿಚಾರಣೆ : ಇಲ್ಲ.

**(ಸಾಕ್ಷಿಯ ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)**
**(ಮೇಲಿನ ಸಾಕ್ಷ್ಯವನುನ ಸಾಕ್ಷಿಗೆ ಓದಿ, ತಿಳಿಸಿ, ಹೇಳಿದಾಗ, ಅವರು ಅದು ಸರಿ ಇದೆ ಎಂದು ಒಪ್ಪಿದ್ದಾರೆ.)**

**ಅಧ್ಯಕ್ಷಾಧಿಕಾರಿಗಳು,**
**ಕಾರ್ಮಿಕ ನ್ಯಾಯಾಲಯ, ಮೈಸೂರು**